ಪಿಡಬ್ಲ್ಯೂ: 1

ದಿನಾಂಕ: 14-06-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ ಕೆ ಎಸ್ ಆರ್ ವಕೀಲರಿಂದಃ

ಎದುರುದಾರರ ಮೇಲೆ ನನ್ನ ಮಕ್ಕಳ ಕಡೆಯಿಂದ ಇನ್ನೊಂದು ಕೇಸು ಮಾಡಿಸಿದ್ದೇನೆ ಅಂದರೆ ಸರಿ. ಅದು ಓ ಎಸ್ ನಂ.41/2021 ಅಂದರೆ ಸರಿ. ಆ ಕೇಸಿನಲ್ಲಿ ಯಾತಾಸ್ಥಿತಿ ಕಾಪಾಡಿಕೊಂಡು ಹೋಗಿ ಅಂತ ಆದೇಶ ಆಗಿದೆ ಅಂದರೆ ಸರಿ. ನನಗೆ ಹೀಗೆ ಆದೇಶ ಆದ ದಿವಸವೇ ಗೊತ್ತಿತ್ತು ಅಂದರೆ ಸರಿಯಲ್ಲ. ಈ ದಾವಾಸ್ತಿಗೆ ಸಂಬಂಧಪಟ್ಟಂತೆ ಪ್ರತಿವಾದಿಯರ ವಿರುದ್ಧ ಒಂದು ಕ್ರಿಮಿನಲ್ ಕೇಸ್ ಸಹ ಮಾಡಿಸಿದ್ದೇನೆ ಅಂದರೆ ಸರಿ. ಅದೇ ರೀತಿ ಎದುರುದಾರರು ಸಹ ನನ್ನ ಮೇಲೆ ಒಂದು ಕ್ರಿಮಿನಲ್ ಕೇಸ್ ಮಾಡಿದ್ದಾರೆ ಅಂದರೆ ಸರಿ. ಆ ಕೇಸಿನಲ್ಲಿಯೂ ಸಹ ನಾನು ನ್ಯಾಯಾಲಯಕ್ಕೆ ಬಂದು ಹಾಜರಾಗುತ್ತಿದ್ದೇನೆ ಅಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಅಂತ ನನಗೆ ಗೊತ್ತಿದೆ. 2022 ರಲ್ಲಿ ನನಗೆ ಯಾವುದೇ ಅಪಗಾತ ಆಗಿಲ್ಲ, ನಾನು ನ್ಯಾಯಾಲಯಕ್ಕೆ ಬಂದು ಹೋಗುತ್ತಿದ್ದೆ ಅಂದರೆ ಸರಿಯಲ್ಲ. ನನಗೆ ಅಪಗಾತ ಆಗಿಲ್ಲ, ಆ ಕಾರಣ ನನ್ನ ಮಕ್ಕಳು ನನ್ನ ಜೊತೆ ಇಲ್ಲ ಅಂದರೆ ನನ್ನ ಮಕ್ಕಳು ಜೊತೆಗೆ ಇದ್ದಾರೆ, ನನ್ನ ಕಾಲಿಗೆ ರಾಡ್ ಹಾಕಿದ್ದಾರೆ ಅಂತ ಹೇಳುತ್ತಾರೆ. ನನ್ನ ಕಾಲಿಗೆ 2022 ಕ್ಕಿಂತ ಮೊದಲು ರಾಡ್ ಹಾಕಿದ್ದಾರೆ ಅಂದರೆ ಸರಿಯಲ್ಲ. ನನಗೆ ಆದೇಶ ಆದ ದಿವಸದಿಂದ ಆ ವಿಷಯ ಗೊತ್ತಿದ್ದರೂ ಕೂಡ ನಾನು ಉದ್ದೇಶ ಪೂರ್ವಕವಾಗಿ ತಡ ಮಾಡಿ ಅಫೀಲು ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ವೈದ್ಯಕೀಯ ದಾಖಲೆಗಳನ್ನು ಕೇಸಿಗೋಸ್ಕರ ಸುಳ್ಳು ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ,

(2 ನೇ ಎದುರುದಾರರ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಅಂತ ತೆಗೆದುಕೊಳ್ಳಲಾಯಿತು)

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
(ಉಂಡಿ ಮಂಜುಳ ಶಿವಪ್ಪ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫಸಿ, ಗುಬ್ಬಿ